



ಗರ್ಭಗೃಹದ
ದ್ವಾರದಿಂದ ಕಾಣುವ
ಸಭಾಮಂಟಪ

## ಗಣಿತ–ಖಗೋಲಶಾಸ್ತ್ರ ಪರಿಕಲ್ಪನೆ

ಭಾರತದಲ್ಲಿನ ಯಾವುದೇ ಪುರಾತನ ದೇವಾಲಯವನ್ನು ಗಣಿತದ ಪರಿಕಲ್ಪನೆಗಳಿಗೆ ಅನುಗುಣವಾಗಿ ನಿರ್ಮಿಸಿರುವುದನ್ನು ಗಮನಿಸಬಹುದು. ಮೊಧೇರಾ ದೇವಾಲಯವೂ ಇದಕ್ಕೆ ಹೊರತಾಗಿಲ್ಲ. ಖಗೋಲಶಾಸ್ತ್ರದ ಹಲವಾರು ಪರಿಕಲ್ಪನೆಗಳನ್ನು ದೇವಾಲಯ ನಿರ್ಮಾಣದ ರಚನೆಗಳಲ್ಲಿ ಕಾಣಬಹುದು. ದೇವಾಲಯವನ್ನು ಕರ್ಕಾಟಕ ಸಂಕ್ರಾಂತಿ ರೇಖೆಯ ಮೇಲೆ ಕಟ್ಟಲಾಗಿದೆ. ಶತಮಾನಗಳು ಕಳೆದುದರಿಂದ ಕರ್ಕಾಟಕ ಸಂಕ್ರಾಂತಿ ರೇಖೆಯ ಪಲ್ಲಟವಾಗಿರುವುದನ್ನು ಕಾಣಬಹುದು.

ಸೂರ್ಯನ ಬೆಳಕು ಸರಳ ರೇಖೆಯಲ್ಲಿ ಚಲಿಸುತ್ತದೆ ಎಂಬುದನ್ನು ತಿಳಿಯಲು, ವಿಷುವತ್ ಸಂಕ್ರಾಂತಿಯ ದಿನಗಳಲ್ಲಿ, ಸೂರ್ಯನ ಮೊದಲ ಕಿರಣಗಳು ನೃತ್ಯಮಂಟಪದ ದ್ವಾರದ ಮೂಲಕ ನೇರವಾಗಿ ಹಾದು ಗರ್ಭಗೃಹದ ಮಧ್ಯಭಾಗಕ್ಕೆ ಸರಿಯಾಗಿ ಬೀಳುವುದನ್ನು ನೋಡಬಹುದು.

ಸೂರ್ಯನ ಶಿಲ್ಪವು ಏಳು ಕುದುರೆಗಳನ್ನು ಒಳಗೊಂಡಿರುವುದು, ಪ್ರಚಲಿತದಲ್ಲಿರುವಂತೆ ಏಳು ದಿನಗಳನ್ನು ಹಾಗೂ ಬಿಳಿಯ ಬಣ್ಣದಲ್ಲಿರುವ ಏಳು ಕಾಮನಬಿಲ್ಲಿನ ಬಣ್ಣಗಳನ್ನು ಪ್ರತಿನಿಧಿಸುತ್ತದೆ. ಗರ್ಭಗೃಹದ ಹೊರಗೋಡೆಯಲ್ಲಿ, ಒಂದು ವರ್ಷದ 12 ತಿಂಗಳನ್ನು ಬಿಂಬಿಸುವ ಹನ್ನೆರಡು ಆದಿತ್ಯ ಶಿಲ್ಪಗಳಿವೆ. ಹಾಗೆಯೇ ಗರ್ಭಗೃಹದ ಒಳಗಡೆ ದಿನದ 24 ಗಂಟೆಗಳನ್ನು ಸೂಚಿಸಲು 24 ಕಂಬಗಳಿವೆ.

ದೇವಾಲಯದ ಮೊದಲ ಭಾಗದ ಸುತ್ತಲೂ ಹೊರಗೋಡೆಯಲ್ಲಿ, ಸರಿಯಾಗಿ 364 ಸಂಖ್ಯೆಯ ಆನೆಯ ಮುಖಗಳು ಹಾಗೂ ಒಂದು ಸಿಂಹದ ಮುಖದ ಶಿಲ್ಪ. ಒಟ್ಟು ಒಂದು ವರ್ಷದಲ್ಲಿನ 365 ದಿನಗಳನ್ನು ಸೂಚಿಸುತ್ತದೆ. ನೃತ್ಯಮಂಟಪವು 52 ಕಂಬಗಳನ್ನು ಹೊಂದಿದ್ದು, ಒಂದು ವರ್ಷದಲ್ಲಿರುವ 52 ವಾರಗಳ ಸಂಕೇತವಾಗಿದೆ.

ಸೂರ್ಯಕುಂಡದ ಕಲ್ಯಾಣಿಯಲ್ಲಿ 108 ಗೂಡು ಗುಡಿಗಳಿವೆ. ಅವುಗಳ ಭೂಮಿವ್ಯಾಸ ಹಾಗೂ ಸೂರ್ಯವ್ಯಾಸಗಳ ಅನುಪಾತ 1:108 ಆಗಿದೆ. ಸೂರ್ಯನಿಗೂ ಭೂಮಿಗೂ ಇರುವ ದೂರ, ಸೂರ್ಯವ್ಯಾಸದ 108ರಷ್ಟು! ಹಾಗೆಯೇ ಭೂಮಿ ಹಾಗೂ ಚಂದ್ರನಿಗೂ ಇರುವ ದೂರ, ಚಂದ್ರವ್ಯಾಸದ 108ರಷ್ಟು!

ಸೂರ್ಯಕುಂಡದ ಕೆಳಮೆಟ್ಟಿಲ ಸಾಲಿನಲ್ಲಿ 28 ಸಣ್ಣಮೆಟ್ಟಿಲುಗಳಿವೆ. ಸೂರ್ಯನಿಗೆ ತನ್ನ ಅಕ್ಷದ ಮೇಲೆ ಸುತ್ತಲು ಭೂಮಿಯ 28 ದಿನಗಳು ಬೇಕು (ಆಧುನಿಕ ಗಣಕದಂತೆ ಸೂರ್ಯನ ಒಂದು ದಿನವು ಭೂಮಿಯ 25 ದಿನಗಳಿಗೆ ಸಮ).

ಸಂಪೂರ್ಣವಾಗಿ ಅರಿವಿಗೆ ಬಾರದ ವಿಸ್ಮಯವಾಗಿದೆ. ಶಿಲ್ಪರಚನೆ, ಕುಸುರಿ, ಶಿಲ್ಪಪರಿಕಲ್ಪನೆಗಳ ಕಡೆ ಗಮನಹರಿಸಿದರೆ ಕೈಮುಗಿದು ನಿಲ್ಲುವುದೊಂದೇ ದಾರಿ!

ಮೊದಲನೇ ಭಾಗವಾದ ಗರ್ಭಗುಡಿಯ ಹೊರಭಾಗದಲ್ಲಿ ಸುತ್ತಲೂ ಹನ್ನೆರಡು ಆದಿತ್ಯರ (ಸೂರ್ಯ) ಶಿಲ್ಪಗಳನ್ನೂ, ಹನ್ನೆರಡು ಗೌರಿಯರ (ಪಾರ್ವತಿಯರ) ಶಿಲ್ಪಗಳನ್ನು ಕಡೆಯಲಾಗಿದೆ. ಪ್ರವಾಸಿಗರ ಮುಖ್ಯ ಆಕರ್ಷಣೆಯೇ ಈ ಸುಂದರ ಶಿಲ್ಪಗಳು. ದೇವಾಲಯದ ಸುತ್ತಲೂ 34 ಬೃಹತ್ ಪಟ್ಟಿಕೆಗಳಿದ್ದು, ಒಂದೊಂದು ಪಟ್ಟಿಕೆಯಲ್ಲೂ ಒಂದು ಮುಖ್ಯಶಿಲ್ಪ ಹಾಗೂ ಅದನ್ನು ಸುತ್ತುವರೆದು ನಾಲ್ಕು ಮೂಲೆಗಳಲ್ಲಿ ಉಪಶಿಲ್ಪಗಳಿವೆ. ಎಲ್ಲ ಶಿಲ್ಪಗಳು ಚೈತನ್ಯಮಯವಾಗಿ ಚಿತ್ರಪಟ್ಟಿಕೆಗೆ ಸಮಷ್ಟಿರೂಪವನ್ನು ಕೊಡುವಂತಿವೆ. ಇವುಗಳಲ್ಲಿ ಅಷ್ಟದಿಕ್ಪಾಲಕರ ಜೊತೆಗೆ, ವರ್ಷದ ಪ್ರತಿ ತಿಂಗಳಿಗೂ ಒಬ್ಬರಂತೆ ಹನ್ನೆರಡು ಆದಿತ್ಯರು ಹಾಗೂ ಹನ್ನೆರಡು ಗೌರಿಯ ಶಿಲ್ಪಗಳಿವೆ. ಏಳು ಕುದುರೆಗಳನ್ನು (ವಾರದ ಏಳುದಿನಗಳನ್ನು ಸೂಚಿಸುವ) ಹೊಂದಿದ ಸೂರ್ಯನ ಶಿಲ್ಪಗಳಂತೂ ಅತ್ಯಾಕರ್ಷಕ.

ಸೂರ್ಯನ ಇಕ್ಕೆಲಗಳಲ್ಲಿ ಸಂಧ್ಯಾ (ಬೆಳಕು) ಹಾಗೂ ಛಾಯಾ (ನೆರಳು) ಹೆಣ್ಣು ಶಿಲ್ಪಗಳಿವೆ. ಅಲ್ಲದೆ ಇಂದ್ರ, ಅಗ್ನಿ, ವಾಯು, ವರುಣ, ನಿರ್‌ತಿ (ನೈರುತ್ಯ) ಹಾಗೂ ತ್ರಿಪಾದ ಭೈರವ ಶಿಲ್ಪಗಳನ್ನು ನೋಡಬಹುದು. ಮುಂದಿನ ಹನ್ನೆರಡು ಪಟ್ಟಿಕೆಗಳಲ್ಲಿ ದ್ವಾದಶಗೌರಿಯರ ಶಿಲ್ಪಗಳಿವೆ. ದಕ್ಷಯಜ್ಞದಲ್ಲಿ ಸ್ವಯಂ ಆಹುತಿಯಾಗಿ ನಂತರ ಶಿವನನ್ನು ಸೇರಿದ ಪಾರ್ವತಿಯ ಸುಂದರ ರೂಪಗಳನ್ನು ಬಿಂಬಿಸಿವೆ ಈ ಗೌರಿಶಿಲ್ಪಗಳು. ಗೋಡೆಯ ಕೆಳಭಾಗದ ಸಾಲು ಪಟ್ಟಿಗಳಲ್ಲಿ, ನೃತ್ಯಭಂಗಿಯಲ್ಲಿನ ಮಾನವಾಕೃತಿಗಳು, ಮಿಥುನಶಿಲ್ಪಗಳು, ಗರ್ಭಿಣಿಯೊಬ್ಬಳು ಮಗುವಿಗೆ ಜನ್ಮಕೊಡುವ ಚಿತ್ರ, ಯುದ್ಧವೀರರ ಸಾಲುಶಿಲ್ಪಗಳಿವೆ. ಆನೆಯ ಮುಖಗಳ ಸಾಲುಶಿಲ್ಪವೂ ಇದ್ದು ಮೇಲೆ–ಕೆಳಗೆ ಕಮಲ ಹಾಗೂ ಲತಾವಿನ್ಯಾಸಗಳಿಂದ ಅಲಂಕೃತಗೊಂಡಿವೆ.

ಗರ್ಭಗುಡಿಯ ಪ್ರವೇಶದ್ವಾರವು ಕಲಾತ್ಮಕ ತೋರಣಕಂಬ ಹೊಂದಿದೆ. ಒಳಗೆ ಕಾಲಿಟ್ಟೊಡನೆ ಕಾಣುವುದು ಕೆತ್ತನೆಗಳಿಂದ ಕೂಡಿದ ಎತ್ತರದ ಕಂಬಗಳು. ಕಂಬಗಳನ್ನು ಅಷ್ಟಭುಜಾಕೃತಿಯಲ್ಲಿ ಕಡೆಯಲಾಗಿದ್ದು, ನವರಂಗದ ರಚನೆಯೂ ಅಷ್ಟಭುಜಾಕೃತಿಯಾಗಿದೆ.